ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 149/2023 C/W Spl.C. 157/2023**

**ಫ್ರಾಸಾ- 4 ಚಾಸಾ- 4**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ರಮೇಶ್ ಎನ್ ಹೆಚ್ |
| ತಂದೆಯ ಹೆಸರುಃ | : | ಹನುಮೇಗೌಡ |
| ವಯಸ್ಸುಃ | : | 39 ವರ್ಷ |
| ಉದ್ಯೋಗಃ | : | ವ್ಯವಸಾಯ |
| ವಾಸ | : | ನಾಗರಹಳ್ಳಿ ಗ್ರಾಮ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 08-04-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಆರೋಪಿ ಗೊತ್ತು. ಆತ ನಮ್ಮೂರಿನವರು. ಈಗ ತೋರಿಸಿದ ನಿಪಿ-2 ರಲ್ಲಿ ನನ್ನ ರುಜು ಇದೆ. ಈ ರುಜುವನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 4-5 ವರ್ಷಗಳ ಹಿಂದೆ ಗಂಡಸಿ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿರುತ್ತಾರೆಂದು ಗೊತ್ತಿಲ್ಲ. ಈಗ ತೋರಿಸಿದ ನಿಪಿ-3 ರಿಂದ 15 ರ ಫೋಟೋದಲ್ಲಿ ನಾನು ಇದ್ದೇನೆ. ಅವುಗಳನ್ನು ಎಲ್ಲಿ ತೆಗೆದರೆಂದು ಗೊತ್ತಿಲ್ಲ. ಏತಕ್ಕೆ ತೆಗೆದರೆಂದು ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಗಾಂಜಾ ವಶಪಡಿಸಿಕೊಂಡಿಲ್ಲ. ನನ್ನನು ಪೊಲೀಸರು ನಾಗರಹಳ್ಳಿ ಗ್ರಾಮದ ಆರೊಪಿತರ ಜಮೀನಿನಿಗೆ ಕರೆದುಕೊಂಡು ಹೋಗಿಲ್ಲ. ಅಲ್ಲಿ ಗಾಂಜಾ ಬೆಳೆದಿರುವುದನ್ನು ನಾನು ನೋಡಿಲ್ಲ. ನಿಪಿ-16ರಲ್ಲಿ ನನ್ನ ರುಜು ಇರುತ್ತದೆ. ಅದನ್ನು ನಿಪಿ-16(ಬಿ) ಎಂದು ಗುರುತಿಸಲಾಯಿತು. ಪೊಲೀಸರಿಗೆ ನಾನು ಪ್ರತ್ಯೇಕ ಹೇಳಿಕೆ ಕೊಟ್ಟಿಲ್ಲ. ಎಂ.ಒ.1ನ್ನು ನಾನು ಈ ಹಿಂದೆ ನೋಡಿಲ್ಲ.

(ಈ ಹಂತದಲ್ಲಿ ಮಾನ್ಯ ವಿಶೇಷ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ದಾಖಲೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ವಿಶೇಷ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**<u>ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ವಿಶೇಷ ಅಭಿಯೋಜಕರಿಂದಃ</u>**

ದಿನಾಂಕ 29-8-21ರಂದು ಪೊಲೀಸರು ಆರೋಪಿತರ ಹೊಲದ ಬಳಿ ಬಂದಿದ್ದರು ಅಲ್ಲಿಗೆ ನನ್ನನ್ನು ಕರೆಸಿದ್ದರು ಎಂದರೆ ನಿಜ. ಅಲ್ಲಿ ಪೊಲೀಸರು ನನ್ನ ಸಮಕ್ಷಮ ಆರೊಪಿತರ ಹೊಲವನ್ನು ಪರಿಶೀಲನೆ ಮಾಡಿದರು ಎಂದರೆ ಸಾಕ್ಷಿಯು ಪೊಲೀಸರು ಅಲ್ಲಿ ನಿಂತಿದ್ದರು ನಾನು ಸಹಿ ಹಾಕಿದೆನು ಎನ್ನುತ್ತಾರೆ. ಅಲ್ಲಿ ಆರೋಪಿತರು 4 ಹಸಿ ಗಾಂಜಾ ಗಿಡಗಳನ್ನು ನೆಟ್ಟಿದ್ದರು ಎಂದರೆ ನಾನು ನೋಡಿಲ್ಲ. ಪೊಲೀಸರು ಅದನ್ನು ಬೇರುಸಮೇತ ಕಿತ್ತು ತೂಕ ಮಾಡಿದಾಗ 1 ಕೆಜಿ 920 ಗ್ರಾಂ ಇತ್ತು ಎಂದರೆ ನಾನು ನೋಡಿಲ್ಲ. ಪೊಲೀಸರು ಅಲ್ಲಿ ಎಂ.ಒ.1ನ್ನು ಮಾದರಿಯಾಗಿ ತೆಗೆದರು ಎಂದರೆ ಸರಿಯಲ್ಲ. ಆ ಗಂಜಾ ಗಿಡಗಳನ್ನು ವಶಪಡಿಸಿಕೊಂಡು ಮಾಡಿದ ನಿಪಿ-2 ರ ಮಹಜರಿಗೆ ನಾನುಅಲ್ಲೇ ಸಹಿ ಹಾಕಿದ್ದು ಮತ್ತು ಅದೇ ಸಮಯದಲ್ಲಿ ಪೊಲೀಸರು ನಿಪಿ-3 ರಿಂದ 15 ರ ಫೋಟೋಗಳನ್ನು ತೆಗೆದದ್ದು ಎಂದರೆ ಸರಿಯಲ್ಲ. ಈ ಸಂಬಂಧವಾಗಿ ನಾನು ಪೊಲೀಸರಿಗೆ ಈಗ ಓದಿ ಹೇಳಿದಂತೆ ಹೇಳಿಕೆ ಕೂಡ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಹೇಳಿಕೆಯ ಭಾಗವನ್ನು ನಿಪಿ-18 ಎಂದು ಗುರುತಿಸಲಾಯಿತು. ಹಾಗೆಯೇ ನನಗೆ ಸ್ಥಳಕ್ಕೆ ಬಂದಾಗ ನಿಪಿ-16ರಂತೆ ನೋಟೀಸು ಸಹ ನೀಡಿದ್ದರು ಎಂದರೆ ಸರಿಯಲ್ಲ. ನಾನು 7ನೇ ತರಗತಿ ಓದಿರುತ್ತೇನೆ. ಯಾವುದೇ ದಾಖಲೆಯನ್ನು ಓದಿ ನೋಡದೆ ಸಹಿ ಹಾಕುವ ಅಭ್ಯಾಸ ನನಗೆ ಇಲ್ಲ. ಎಲ್ಲಾ ನನ್ನ ಸಮಕ್ಷಮ ನಡೆಸಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ</u>**

ಇಲ್ಲವೆಂದು ಹೇಳುತ್ತಾರೆ

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**